ವಿಚಾರಿಸಿದರು. ಎಲ್ಲರದೂ ಒಂದೇ ಉತ್ತರ. ನಮ್ಮ ಲಾರಿಗಳಲ್ಲಿ ಕಾನೂಬಾಹಿರ ವಸ್ತುಗಳನ್ನು ತಂದಿಲ್ಲ. ನಾವು ತಂದು ವಿಲೇ ಮಾಡಿದ ಯಂತ್ರಗಳ ಬಿಡಿ ಭಾಗಗಳು, ಮನೆ ಸಾಮಾನು ಇತ್ಯಾದಿ ಲೋಡುಗಳ ವಿವರ ಇದೆ. ಅವನ್ನು ತರಿಸಿಕೊಂಡವರ ವಿಳಾಸಗಳೂ ಇವೆ. ಬೇಕಾದರೆ ಕೊಡ್ತೀವಿ ಅಂದರು. ಲಾರಿಗಳಲ್ಲಿ ತರುವ ವಸ್ತುಗಳು, ಉಪಕರಣಗಳು ಪ್ಯಾಕ್ ಆಗಿರ್ತವೆ. ನಾವು ಅವನ್ನು ಬಿಡಿಸಿ ನೋಡಲ್ಲ ಅಂತಲೂ ಹೇಳಿದರು. ಯಾವಾಗಲೋ ತಂದಿರಬಹುದಾದ ಪಾರ್ಸಲ್‌ಗಳಿಗಾಗಿ ಈಗ ಹುಡುಕುವುದರಲ್ಲಿ ಅರ್ಥ ಇಲ್ಲ ಅನ್ನಿಸಿತು ಪುರಿ ಸಾಹೇಬರಿಗೆ.

ಮೂರು ದಿನಕ್ಕೊಮ್ಮೆ ರಾಘವನ್, ಕಮಿಷನರ್‌ಗೆ ಫೋನ್ ಮಾಡಿ ಏನಾದರೂ ಬೆಳವಣಿಗೆ ಆಯಿತೇ ಎಂದು ವಿಚಾರಿಸುತ್ತಲೇ ಇದ್ದರು. ಅವರಿಗೆ ಉತ್ತರ ಹೇಳಿ ಹೇಳಿ ಕಮಿಷನರ್ ಸಾಹೇಬರು ಸುಸ್ತಾದರು. ಸಿಟಿಯಲ್ಲಿ ರಾತ್ರಿ ಹೊತ್ತು ವೆಪನ್‌ಗಳನ್ನು ಹೊರಕ್ಕೆ ಸಾಗಿಸುವ ಸಾಧ್ಯತೆ ಇರುತ್ತೆ. ಚೆಕ್‌ಪೋಸ್ಟ್‌ಗಳಲ್ಲಿ ನಿಗಾ ಇಡಲು ಹೇಳಿ ಎಂದು ರಾಘವನ್ ಸಲಹೆ ಕೊಟ್ಟರು.

★★★

ಕಾಟನ್ ಮಿಲ್‌ಗಳಿಂದ ಮಂತ್ಲಿ ಮಾಮೂಲು ವಸೂಲು ಮಾಡುವ ಕಾನ್‌ಸ್ಟೆಬಲ್ ಒಬ್ಬ ಹೇಳಿದ ಮಾಹಿತಿ ಕೇಳಿದ ಮೇಲೆ ಕೇಶವರೆಡ್ಡಿಗೆ ಭಯ ಶುರುವಾಯಿತು.

ಸಿಟಿಯ ಎಲ್ಲಾ ಸಿಐ ಮತ್ತು ಪಿಎಸ್ಸೈಗಳು ಒಂದೂವರೆ ತಿಂಗಳಿಂದ ಯಾರನ್ನೂ ಹುಡುಕುತ್ತಿದ್ದಾರೆ ಎನ್ನುವುದಷ್ಟೇ ಅವನು ಕೊಟ್ಟ ಮಾಹಿತಿ. ಅಯ್ಯಗಾರು ಇನ್ನಷ್ಟು ದಿನ ಆಸ್ಪತ್ರೆಯಲ್ಲಿ ಇರುವುದು ಅಪಾಯ ಅನ್ನಿಸಿತು ರೆಡ್ಡಿಗೆ.

ಅದೇ ದಿನ ಕತ್ತಲು ಕವಿಯುವ ಹೊತ್ತಿನಲ್ಲಿ ಅವರನ್ನು ಆಟೊ ಒಂದರಲ್ಲಿ ಕೂರಿಸಿ ಎಸ್‌ಪಿ ಸಾಹೇಬರ ಬಂಗಲೆಯಿಂದ ಕೂಗಳತೆ ದೂರದಲ್ಲಿ ಇರೋ ಶ್ರೀದೇವಿ ನಗರ ಎಂಬ ಹೆಸರಿನ ಅರೆಕೊಳೆಗೇರಿಯ ಮನೆಯೊಂದಕ್ಕೆ ಕಳಿಸಿಕೊಟ್ಟ. ಆ ಮನೆ ಪೊಲೀಸ್ ಇಲಾಖೆಯ ನಿವೃತ್ತ ನೌಕರನದು. ಸಾಕಷ್ಟು ಚೆನ್ನಾಗಿಯೇ ಇದ್ದ ಮನೆಯ ಮೇಲಂತಸ್ತಿನ ರೂಮೊಂದರಲ್ಲಿ ಅಯ್ಯವಾರು ಬಂದು ಸೇರಿಕೊಂಡಿದ್ದು ಸುತ್ತಲಿನ ಜನರಿಗೆ ಗೊತ್ತೇ ಆಗಲಿಲ್ಲ. ರೂಮಿನಲ್ಲಿ ಎಲ್ಲ ಸೌಕರ್ಯಗಳೂ ಇದ್ದವು. ರೂಮಿಗೆ ಹೊಂದಿಕೊಂಡಂತೆ ಒಂದು ಪಾರಿವಾಳದ ಗೂಡಿತ್ತು. ಗೂಡಿನಿಂದ ರಾತ್ರಿ ಹೊತ್ತು ಬರುತ್ತಿದ್ದ ಗುಕ್, ಗುಕ್ ಸದ್ದಿನಿಂದ ಅಯ್ಯಗೆ ಎರಡು ರಾತ್ರಿ ನಿದ್ದೆ ಹತ್ತಲಿಲ್ಲ. ನಂತರ ಸದ್ದು ಅಭ್ಯಾಸವಾಯಿತು. ಪೊಲೀಸರು ಅಯ್ಯ ಅವರನ್ನು ಹುಡುಕಿಕೊಂಡು ಈ ಮನೆ ಬಳಿ ಬರುವ ಸಾಧ್ಯತೆ ಇಲ್ಲ ಅನ್ನಿಸಿ ಕೇಶವರೆಡ್ಡಿ ನಿರಾಳನಾದ.

ಒಂದು ದಿನ ಹಗಲು ಹೊತ್ತಲ್ಲೇ ಬಾಲಗೋವಿಂದ ಐವತ್ತು ವರ್ಷದ ಹೆಂಗಸೊಬ್ಬಳನ್ನು ಆಟೊದಲ್ಲಿ ಕೂರಿಸಿಕೊಂಡು ಮುತ್ಯಾಲನ ಮನೆಗೆ ಕರೆತಂದ. ಅವಳ ಬಟ್ಟೆ ಬರೆಗಳು, ಹಾಸಿಗೆ, ಎರಡು ಉದ್ದನೆಯ ಮರದ ಪಟ್ಟಿಗಳಿಂದ ಬಿಗಿಮಾಡಿದ್ದ ಪೆಟ್ಟಿಗೆಗಳನ್ನೂ ತಂದು ಅವನೇ ಮನೆಯೊಳಕ್ಕೆ ಇಟ್ಟು ಹೋದ. ಇವು ಪೆದ್ದಾಯನ ಅವರದ್ದು. ಅವನ್ನು ಒಳಗೆ ಯಾರಿಗೂ ಕಾಣದಂತೆ ಇಡಿ. ಅವನ್ನು ಯಾರೂ ಬಿಚ್ಚಿ ನೋಡಬಾರದು ಅಂತ ಹೇಳಿದ್ದಾರೆ ಅಂದ. ಬಾಲಗೋವಿಂದ ಬಂದು ಹೋದ ಸಮಯದಲ್ಲಿ ವೆಂಕಟಗಿರಿ ಮನೆಯಲ್ಲಿ ಇರಲಿಲ್ಲ.

ಕೆಲಸದ ಹೆಂಗಸು ಬಂದ ಮೇಲೆ ಮನೆಯಲ್ಲಿ ನಾಲ್ವರಾದರು. ಬೇಸಿಗೆಯಾದ್ದರಿಂದ ಮುತ್ಯಾಲ, ವೆಂಕಟಗಿರಿ ಇಬ್ಬರೂ ಮನೆಯ ಹೊರಗೆ ಮಲಗುತ್ತಿದ್ದರು. ಸಾಯಿಲಕ್ಷ್ಮಿ ಸಹಾಯಕ್ಕೆ ಬಂದ ಹೆಂಗಸು ಮೇಲು ನೋಟಕ್ಕೆ ಅಮಾಯಕಳಂತೆ ಕಂಡಳು. ಅವಳ ಜತೆ ತಂದ ಪೆಟ್ಟಿಗೆಗಳನ್ನು ಯಾರೂ ಮುಟ್ಟದಂತೆ, ತೆರೆದು ನೋಡದಂತೆ ಕಾಯತೊಡಗಿದಳು. ಅವಳು ಕೊಂಡಯ್ಯನ ದೂರದ ಸಂಬಂಧಿಯಂತೆ. ಉರವಕೊಂಡ ಹತ್ತಿರದ ಗೊಲ್ಲಪಲ್ಲಿ ಅವಳ ಊರಂತೆ. ಅವಳಿಗೆ ಒಬ್ಬನೇ ಮಗ.